# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ 767/2023

ಸಿ.ಡಬ್ಲ್ಯೂ- 15
ಪಿ.ಡಬ್ಲ್ಯೂ- 4

**ದಿನಾಂಕಃ 21-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಸಿಂಗಾಡೆಪ್ಪ ಖಿಲಾರಿ |
| ತಂದೆಯ/ಗಂಡನ ಹೆಸರು | : ಉದ್ದಪ್ಪ |
| ವಯಸ್ಸು | : 56 ವರ್ಷ |
| ಉದ್ಯೋಗ | : ASI ಘಟಪ್ರಭ ಪೊಲೀಸ್ ಠಾಣಾ |
| ವಾಸ ಸ್ಥಳ | : ಘಟಪ್ರಭ |
| ತಾಲೂಕು | : ಗೋಕಾಕ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ-**

ನಾನು 2015 ರಿಂದ 2018 ರವರೆಗೆ ಘಟಪ್ರಭ ಪೊ. ಠಾಣೆ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 03.05.2018 ರಂದು ಪ್ರಸ್ತುತ ಪ್ರಕರಣದ ಮೃತ ಪಿರಮಾ ಮಲಿಕಸಾಬ ರನ್ನಮಲಿ ಇವಳ ಶವ ಪಂಚನಾಮೆಯನ್ನು ಮಾಡುವಂತೆ ಪ್ರಕರಣದ ತನಿಖೆಗಾಗಿ ಚಾಸಾ 16 ರವರು ನನಗೆ ನಿರ್ದೇಶನ ನೀಡಿದ್ದು ಅದೇ ನಾನು ಗೋಕಾಕನ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪಂಚರಾದ ಚಾಸಾ 4 ಮತ್ತು 5 ರವರ ಸಮಕ್ಷಮ ಮೃತಳ ಶವ ಪಂಚನಾಮೆಯನ್ನು ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಮಾಡಿ, ಭಾವಚಿತ್ರ ತೆಗೆದು, ಸ್ಥಳದಲ್ಲಿ ಪಂಚರ ಸಹಿ ಪಡೆದುಕೊಂಡಿರುತ್ತೇನೆ. ಮೃತಳ ಶವ ಪಂಚನಾಮೆಯನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಭಾವಚಿತ್ರವನ್ನು ನಿಪಿ-8 ಎಂದು ಗುರುತಿಸಲಾಯಿತು. ನಂತರ ನನ್ನ ಸಿಬ್ಬಂದಿ ಚಾಸಾ 14 ರವರ ಮುಖಾಂತರ ಮೃತಳ PM ಪರೀಕ್ಷೆಗಾಗಿ ಮೃತಳ ಶವವನ್ನು ವೈದ್ಯರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಿಪಿ-7 ಮತ್ತು ದಾಖಲಾತಿಗಳನ್ನು ನನ್ನ ಮೇಲಾಧಿಕಾರಿ ಚಾಸಾ 17 ರವರಿಗೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ Sri.MIB ವಕೀಲರಿಂದಃ**

ಚಾಸಾ 16 ರವರು ಮೃತಳ ಶವ ಪಂಚನಾಮೆ ಮಾಡುವಂತೆ ಲಿಖಿತವಾಗಿ ನಿರ್ದೇಶನ ನೀಡಿರುವುದಿಲ್ಲ ಮೌಖಿಕವಾಗಿ ನಿರ್ದೇಶಿಸಿರುತ್ತಾರೆ. ಪ್ರಕರಣದ ವಿಚಾರವಾಗಿ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿ.ಸಿ. ನಂಃ 767/2023
ಸಿ.ಡಬ್ಲ್ಯೂ- 15
ಪಿ.ಡಬ್ಲ್ಯೂ- 4

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.